ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:893/2024
ಸಿ.ಡಬ್ಲ್ಯು 1 ಪಿ.ಡಬ್ಲ್ಯೂ : 1

| | |
|---|---|
| ಸಾಕ್ಷಿದಾರರ ಹೆಸರು | ಎಂ.ಟಿ. ಲೀಲಾನಂದ್ |
| ತಂದೆಯ ಹೆಸರು | ಎಂ.ಆರ್. ತಿಮ್ಮೇಗೌಡ |
| ವಯಸ್ಸು | 47 ವರ್ಷ |
| ಉದ್ಯೋಗ | ಆಹಾರ ನಿರೀಕ್ಷಕರು |
| ವಾಸಸ್ಥಳ | ಕಾಪು. |

ದಿನಾಂಕಃ 20.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ದಿನಾಂಕ 20.06.2022 ರಿಂದ ಕಾಪು ಆಹಾರ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸದ್ರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 20.09.2022 ರಂದು ಕಾಪು ವೃತ್ತ ನಿರೀಕ್ಷಕರಾದ ಕೆ.ಸಿ. ಪೂವಯ್ಯರವರಿಂದ ಸಂಜೆ 5.50 ಕರೆ ಬಂದಿರುತ್ತದೆ. ಕಾಪು ತಾಲ್ಲೂಕು ನಡ್ಸಾಲ್ ಗ್ರಾಮದ ಕನ್ನಂಗಾರು ಎಂಬಲ್ಲಿ ಆರೋಪಿಯ ಮನೆಯ ಆವರಣದಲ್ಲಿ ಅಕ್ರಮವಾಗಿ ಪಡಿತರ ಚೀಟಿಯ ಅಕ್ಕಿಯನ್ನು ದಾಸ್ತಾನು ಮಾಡಿದ್ದಾರೆಂದು ಮಾಹಿತಿ ಬಂದಿದೆ, ಈ ಕೂಡಲೇ ಸ್ಥಳಕ್ಕೆ ಬರುವಂತೆ ತಿಳಿಸಿರುತ್ತಾರೆ. ನಂತರ ನಾನು ಸಂಜೆ 6.20 ಸ್ಥಳಕ್ಕೆ ತಲುಪಿರುತ್ತೇನೆ. ಆಗ ಸ್ಥಳದಲ್ಲಿ ಚಾ.ಸಾ.2,3, ಪೋಲೀಸ್ ಸಿಬ್ಬಂದಿಯವರು ಹಾಗೂ ಗ್ರಾಮಸ್ಥರು ಹಾಜರಿದ್ದರು. ನಂತರ ಮಾಹಿತಿಯನ್ನು ಚಾ.ಸಾ.2 ರವರು ತಿಳಿಸಿದರು. ನಂತರ 6.30 ಕ್ಕೆ ದಾಳಿಯನ್ನು ಮಾಡಿರುತ್ತೇವೆ. ಆ ಸಮಯದಲ್ಲಿ ಮನೆಯ ಹೊರಾಂಗಣದಲ್ಲಿ ಕೆಲವು ಅಕ್ಕಿ ಚೀಲಗಳು ಹಾಗೂ ಕೂಲಿ ಕೆಲಸಗಾರರಾದ ಚಾ.ಸಾ.5 ಮತ್ತು 6 ರವರು ಇದ್ದರು. ನಂತರ ಮನೆಯ ಬಾಗಿಲನ್ನು ತೆಗೆಸಿದಾಗ ಆರೋಪಿಯ ಮಕ್ಕಳಾದ ಸನಾ ಹಾಗೂ ಹಸೀನರವರು ಇದ್ದರು. ಅವರನ್ನು ಆರೋಪಿಯ ಬಗ್ಗೆ ವಿಚಾರಿಸಿದಾಗ ಆರೋಪಿ ಹಾಗೂ ಅವರ ಪತ್ನಿ ಮಂಗಳೂರಿಗೆ ಹೋಗಿದ್ದಾರೆಂದು ತಿಳಿಸಿರುತ್ತಾರೆ. ಅಕ್ಕಿಯ ದಾಸ್ತಾನಿನ ಬಗ್ಗೆ

ವಿಚಾರಿಸಿದಾಗ ನಮಗೆ ಈ ವ್ಯವಹಾರದ ಬಗ್ಗೆ ಮಾಹಿತಿ ಇರುವುದಿಲ್ಲ, ಆರೋಪಿಯವರಿಂದಲೇ ಪಡೆದುಕೊಳ್ಳಿ ಎಂದು ತಿಳಿಸಿರುತ್ತಾರೆ. ನಂತರ ಹೊರಾಂಗಣದಲ್ಲಿರುವಂತಹ ಅಕ್ಕಿಯನ್ನಲ್ಲದೆ, ಗೋಧಾಮು ಪರಿಶೀಲನೆ ಮಾಡಿರುತ್ತೇವೆ. ಅಲ್ಲಿ 50 ಕೆ.ಜಿ. ಯ ತೂಕದ 33 ಪ್ಯಾಕ್ ಮಾಡಿದ ಬಿಳಿ ಪಾಲಿಥಿನ್ ಚೀಲದಲ್ಲಿ ಬೆಳ್ತಗಿ ಅಕ್ಕಿ ಕಂಡುಬಂತು ಹಾಗೂ 50 ಕೆ.ಜಿ. ಯ ತೂಕದ 182 ಪ್ಯಾಕ್ ಮಾಡಿದ ಬಿಳಿ ಪಾಲಿಥಿನ್ ಚೀಲದಲ್ಲಿ ಕುಚ್ಚಲಕ್ಕಿ ಕಂಡುಬಂತು. ನಂತರ ಮನೆಯ ಹೊರಾಂಗಣದಲ್ಲಿ 50 ಕೆ.ಜಿ. ತೂಕದ 10 ಚೀಲ ಪ್ಯಾಕ್ ಮಾಡಿದ ಕುಚ್ಚಲಕ್ಕಿ ಕಂಡುಬಂತು. ನಂತರ ಮನೆಯ ಹೊರಾಂಗಣದಲ್ಲಿ 30 ಕೆ.ಜಿ. ತೂಕದ 28 ಚೀಲ ಪ್ಯಾಕ್ ಮಾಡಿದ ಕುಚ್ಚಲಕ್ಕಿ ಕಂಡುಬಂತು. ನಂತರ ಮನೆಯ ಹೊರಾಂಗಣದಲ್ಲಿ 30 ಕೆ.ಜಿ. ತೂಕದ 2 ಚೀಲ ಪ್ಯಾಕ್ ಮಾಡಿದ ಕುಚ್ಚಲಕ್ಕಿ ಕಂಡುಬಂತು. ನಂತರ ಮನೆಯ ಹೊರಾಂಗಣದಲ್ಲಿ 20 ಕೆ.ಜಿ. ತೂಕದ 31 ಚೀಲ ಪ್ಯಾಕ್ ಮಾಡಿದ ಕುಚ್ಚಲಕ್ಕಿ ಕಂಡುಬಂತು. ತೆರೆದಿಟ್ಟ 10 ಚೀಲಗಳಲ್ಲಿ 303 ಕೆ.ಜಿ. ಅಕ್ಕಿ ಇತ್ತು ಹಾಗೂ ತೂಕದ ಯಂತ್ರ ಹಾಗೂ ಚೀಲವನ್ನು ಹೊಲೆಯುವ ಯಂತ್ರ ಇತ್ತು. ನಂತರರ ಅದನ್ನು ವಶಪಕೊಳ್ಳುವ ಸಲುವಾಗಿ ಮಹಜರ್ ರವರನ್ನು ಬರಮಾಡುವಂತೆ ಕೋರಿ ಕೊಂಡಿರುತ್ತೇನೆ. ಸ್ಥಳಕ್ಕೆ ಚಾ.ಸಾ.9 ಮತ್ತು ಇತರ 4 ಜನರನ್ನು ಕರೆಸಿರುತ್ತೇವೆ. ಅವರ ಸಮಕ್ಷಮದಲ್ಲಿ ಮಹಜರ್ ಕ್ರಮವನ್ನು ಸಂಜೆ 6.30 ರಿಂದ ರಾತ್ರಿ 10.15 ರವರೆಗೆ ಮಹಜರ್ ಕ್ರಮ ಜರುಗಿಸಿ ಅಕ್ಕಿ, ತೂಕದ ಯಂತ್ರ ಹಾಗೂ ಹೊಲೆಯುವ ಯಂತ್ರವನ್ನು ವಶಪಡಿಸಿಕೊಂಡಿರುತ್ತೇವೆ. ಅಕ್ಕಿಯನ್ನು ಸಂರಕ್ಷಣೆಯ ದೃಷ್ಟಿಯಿಂದ ವಶಕ್ಕೆ ಪಡೆದು ಟಿ.ಎ.ಪಿ.ಸಿ.ಎಂ.ಎಸ್.ಉಡುಪಿ ಗೋಧಾಮು ವಿಗೆ ಹಸ್ತಾಂತರಿಸಲಾಯಿತು. ಸದ್ರಿ ಪ್ರಕ್ರಿಯೆ ಮುಗಿದ ನಂತರ ಪಡುಬಿದ್ರಿ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದ್ರಿ

ದೂರನ್ನು ಸಾಕ್ಷಿಯವರು ಗುರ್ತಿಸಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯವರ ಸಹಿಯನ್ನು ನಿಪಿ.1(ಎ) ಎಂದು ಗುರ್ತಿಸಲಾಯಿತು. ಮಹಜರ್ ನ್ನು ನಿಪಿ.2 ಎಂದು, ಸಾಕ್ಷಿಯವರ ಸಹಿಯನ್ನು ನಿಪಿ.2(ಎ) ಎಂದು ಗುರ್ತಿಸಲಾಯಿತು. ದುರು ನೀಡಿದ ನಂತರ ದಿನಾಂಕ 21.09.2022 ರಂದು ನಾನು ತಕ್ಷೀರು ಸ್ಥಳ ತೋರಿಸಿದ ಮೇರೆಗೆ ಚಾ.ಸಾ.12 ಮತ್ತು 13 ರವರ ಸಮಕ್ಷಮ ಸಂಜೆ 5.00 ರಿಂದ 6.00 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದ್ರಿ ಮಹಜರ್ ನ್ನು ನಿಪಿ.3 ಎಂದು, ಸಾಕ್ಷಿಯವರ ಸಹಿಯನ್ನು ನಿಪಿ.3(ಎ) ಎಂದು ಗುರ್ತಿಸಲಾಯಿತು. ಆ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತಾರೆ. At this stage the learned defense object the marking of the photos contending that C.D. or the negative is not been produced and only certificate U/Sec. 65(B) is being produced. The learned Sr. APP submits that Sec. 65(B) is enef to get mark the photographs. After taking into consideration the arguments rendered by both parties this court of the opinion that at this stage the documents such photographs are marked subject to the admissibility of such photographs reserving the liberty to render arguments upon the admissibility of photographs at the stage of final arguments. With this objection the photographs are marked as Ex.P.4 to Ex.P.6. ವಶಪಡಿಸಿಕೊಂಡ ಅಕ್ಕಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ವಿಲೇವಾರಿ ಮಾಡಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ
ಉಡುಪಿ.